

ಬರತೊಡಗಿತು. ನಮಗೆ ಸದ್ಯಕ್ಕೆ ಬರಲು ಸಾಧ್ಯವಿಲ್ಲ. ನಮ್ಮ ನಮ್ಮ ಕೆಲಸಗಳಲ್ಲಿ ನಾವು ಅತ್ಯಂತ ಬ್ಯುಸಿಯಾಗಿದ್ದೇವೆ. ನಮಗೆ ರಜೆ ಸಿಗುತ್ತಿಲ್ಲ. ಎಲ್ಲ ಕಾರ್ಯಗಳನ್ನು ಮುಗಿಸಿಬಿಡಿ, ನಂತರ ನಾವು ಬರುತ್ತೇವೆ' ಎಂಬ ಸಬೂಬುಗಳು ಬಂದಿತು.

ಅಮ್ಮನ ಎಲ್ಲ ಕಾರ್ಯಗಳೂ ಮುಗಿದವು. ಹೆತ್ತಮ್ಮನ ಕಾರ್ಯಗಳಿಗೂ ಮಕ್ಕಳು ಬರಲಿಲ್ಲ. ನಂತರವಾದರೂ ಬರುತ್ತಾರೆ ಎಂದು ಅಪ್ಪಯ್ಯ ಕಾದಿದ್ದೊಂದೇ ಬಂತು, ಅವರ್‍ಯಾರೂ ಬರಲೇ ಇಲ್ಲ. ಎಲ್ಲರೂ ಒಂದೊಂದು ನೆಪ ಹೇಳಿದರು. ಇಲ್ಲಿಗೆ ಬಂದು ಅಮ್ಮನ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರಿಂದ ತಪ್ಪಿಸಿ ಕೊಳ್ಳತೊಡಗಿದರು. ಮಕ್ಕಳ ವರ್ತನೆಯಿಂದಲೇ ಅಪ್ಪಯ್ಯ, ಅವರು ಇನ್ನು ಬರುವುದಿಲ್ಲ. ಇಲ್ಲಿಗೆ ಬರುವುದರಿಂದ ತಪ್ಪಿಸಿಕೊಳ್ಳಲು ಒಬ್ಬೊಬ್ಬರು ಒಂದು ಸಬೂಬು ಹೇಳುತ್ತಿದ್ದಾರೆ ಎನ್ನುವುದನ್ನು ಅರಿತರು. ಈ ಹಂತದಲ್ಲಿಯೇ ಇದ್ದಕ್ಕಿದ್ದಂತೆ ಅಪ್ಪಯ್ಯ ಮೌನಕ್ಕೆ ಜಾರಿದ್ದು. ಅವರೊಳಗೆ ಏನು ನಡೆಯುತ್ತಿತ್ತೋ ನನಗೆ ಗೊತ್ತಾಗುತ್ತಿರಲಿಲ್ಲ. ಆದರೆ ಅವರು ತಮ್ಮೊಳಗೆ ತಮ್ಮನ್ನು ಅರೆದುಕೊಳ್ಳುತ್ತಿದ್ದಾರೆ, ಮಥಿಸಿಕೊಳ್ಳುತ್ತಿದ್ದಾರೆ ಎಂಬುದರ ಅರಿವು ನನಗೆ ಬಂದದ್ದು, ಅವರು ನಮ್ಮ ಪೌರಾಣಿಕ ಕಥೆಗಳಲ್ಲಿನ ಪಾತ್ರಗಳನ್ನು ನಮ್ಮ ನಿತ್ಯಜೀವನದ ಘಟನೆಗಳಿಗೆ ಸಮೀಕರಿಸಿ ವಿಷಯಗಳನ್ನು ಹೇಳತೊಡಗಿದಾಗ.

ಅಂಥದ್ದೊಂದು ಕಥೆ ವಾಮನ ಮತ್ತು ಬಲಿ ಚಕ್ರವರ್ತಿಯದು. 'ಪುಟ್ಟ ಬಲಿಚಕ್ರವರ್ತಿ ಕಥೆ ನಿನಗೆ ಗೊತ್ತಲ್ಲವೆ?' ಎಂದು ಒಂದು ದಿನ ಕೇಳಿದರು. 'ನೀವೇ ಹೇಳಿದ್ದಿರಲ್ಲ ನಾನು ಚಿಕ್ಕವಳಿದ್ದಾಗ. ದೊಡ್ಡ ರಾಜನೊಬ್ಬನಿದ್ದ, ಅವನು ಯಾಗವನ್ನು ಮಾಡುತ್ತಿದ್ದ. ಅವನು ಕೊಡುಗೈ ದಾನಿಯಾಗಿದ್ದ ಎಂದೆಲ್ಲ ಹೇಳಿದ್ದಿರಿ, ಅದು ನನಗೆ ನೆನಪಿದೆ. ಈಗೇಕೆ ಆ ಕಥೆ' ಎಂದು ಕೇಳಿದೆ.

'ಅದಕ್ಕೂ ನಮ್ಮ ಜೀವನಕ್ಕೂ ಸಂಬಂಧವಿದೆ. ಬಲಿ ಚಕ್ರವರ್ತಿ ದಾನದ ಹೆಸರಿನಲ್ಲಿ ವಾಮನನ ಕೈಯಲ್ಲಿ ಸಿಕ್ಕಿಕೊಳ್ಳಲಿಲ್ಲವೆ ನಾವೂ ಹಾಗೆಯೇ ಸಿಕ್ಕಿ ಕೊಳ್ಳುತ್ತೇವೆ, ನಮಗೇ ಅರಿವಿಲ್ಲದೆ' ಎಂದು ಹೇಳಿ ಸುಮ್ಮನಾದರು.

ಅಪ್ಪಯ್ಯ ಏನೋ ಹೇಳಲು ಬಯಸುತ್ತಿದ್ದಾರೆ, ಆದರೆ ಹೇಳಲು ಮುಂದಾಗುತ್ತಿಲ್ಲ ಎಂದು ನನಗೆ ಅನ್ನಿಸಿತು. ನೀವು ಏನು ಹೇಳಬೇಕೆಂದಿದ್ದೀರಿ ಅದನ್ನು ಹೇಳಿ ಎಂದು ನಾನೇ ಒತ್ತಾಯಿಸಿದೆ.

ಆಗ ಅವರು ಬಲಿ ದೊಡ್ಡ ದೇಶದ ದೊಡ್ಡ ರಾಜ. ವಾಮನ ಪುಟ್ಟ ದೇಹದ ಸಾಮಾನ್ಯ ವ್ಯಕ್ತಿ. ಅವನು ಯಾಗ ಮಾಡುತ್ತಿದ್ದ ಬಲಿ ಚಕ್ರವರ್ತಿಯಲ್ಲಿಗೆ ಬಂದ. ದಾನದ ವಿಚಾರ ಮಾತನಾಡಿದ. ಇವನೂ ಹ್ಞೂಂ ಎಂದ. ನನಗೆ ನಿನ್ನಿಂದ ಬೇಕಿರುವುದು ಮೂರು ಪಾದದಷ್ಟು ಭೂಮಿಯಷ್ಟೇ ಎಂದ. ಬಲಿ ಚಕ್ರವರ್ತಿಯೂ ಕೇವಲ ಮೂರು ಪಾದವಲ್ಲವೇ ಏನು ಮಹಾ ಎಂದು ಒಪ್ಪಿಕೊಂಡ. ದಾನ ನೀಡಲು ಮುಂದಾದ. ಇವನ ಕುಲಗುರು ಶುಕ್ರಾಚಾರ್ಯ ಇದನ್ನು ತಡೆಯಲೆಂದು ಕಮಂಡಲದ ಬಾಯಿಯೊಳಗೆ ಹೋಗಿ ಸೇರಿಕೊಂಡ. ವಾಮನನಿಗೆ ಇದು ತಿಳಿದಿತ್ತಲ್ಲವೇ. ತನ್ನಲ್ಲಿದ್ದ ದರ್ಭೆಯೊಂದನ್ನು ತೆಗೆದು ಕಮಂಡಲದ ನಳಿಕೆಯೊಳಗೆ ಚುಚ್ಚಿದ. ಶುಕ್ರಾಚಾರ್ಯ ಒಕ್ಕಣ್ಣನಾಗಿ ಕಮಂಡಲದೊಳಗಿಂದ ಹೊರಬಂದ. ವಾಮನ ತಾನು ಪಡೆದ ಮೂರು ಪಾದದ ದಾನದಲ್ಲಿ ಒಂದು ಪಾದವನ್ನು ನೆಲದ ಮೇಲೂ, ಇನ್ನೊಂದು ಪಾದವನ್ನು ಆಕಾಶದಲ್ಲೂ, ಮತ್ತೊಂದು ಪಾದವನ್ನು ಬಲಿ ಚಕ್ರವರ್ತಿಯ ತಲೆಯ ಮೇಲೂ ಇರಿಸಿ ತಾನು ಪಡೆದ ದಾನವನ್ನು ಸ್ವೀಕರಿಸಿದ.

ನಮ್ಮದೂ ಹೀಗೆಯೇ, ನಾವೂ ತಪ್ಪುಗಳನ್ನು ಮತ್ತು ಸರಿಗಳನ್ನು ಅತ್ಯಂತ ಸಣ್ಣದಾಗಿಯೇ ಮಾಡುತ್ತೇವೆ. ನಾವು ಮಾಡುವಾಗ ಆ ತಪ್ಪು, ಸರಿ ಇಷ್ಟು ದೊಡ್ಡದಾಗಿ ದೈತ್ಯಾಕಾರವಾಗಿ ಬೆಳೆದು ನಮ್ಮನ್ನೇ ನುಂಗಿಬಿಡಬಹುದು ಅಥವಾ ಆವರಿಸಿಬಿಡಬಹುದು ಎಂಬ ಕಲ್ಪನೆಯೂ ನಮಗೆ ಇರುವುದಿಲ್ಲ. ನಮಗೇ ಗೊತ್ತಿಲ್ಲದೇ ಇದನ್ನು ನಾವು ಮಾಡಿರುತ್ತೇವೆ. ಅದೇ ಮುಂದೆ ನಮ್ಮ ಜೀವನದ ದಿಕ್ಕುದೆಸೆಗಳನ್ನು ಬದಲಾಯಿಸುತ್ತದೆ ಎಂಬುದು ಸಹ ನಮ್ಮ ಗಮನಕ್ಕೆ ಬಾರದೇ ಹೋಗಿರುತ್ತದೆ ಎಂದು ಹೇಳಿದರು.

ಹೀಗೆ ಹೇಳಿದೆನೆಂದು ಬಲಿ ಚಕ್ರವರ್ತಿಯೇ ತಪ್ಪು ಮಾಡಿದ, ಇನ್ನು ನಾವು ಮಾಡುವುದರಲ್ಲಿ ಏನು ಮಹಾ ಇದೆ ಎಂಬುದಾಗಿ ಭಾವಿಸಲು ನಾನು ಹೇಳಲಾರೆ. ಅವನು ಮಾಡಿದ ತಪ್ಪಿನಿಂದ